Sri H. K. VEERANNA GOWDH.—At cost.

Sri ANNA RAO GANAMUKHI.—What is the value of the land ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವು ಸಂದರ್ಭದಲ್ಲಿ ಲ್ಯಾಂಡ್ಸ್ ವ್ಯಾಲ್ಯು ನಿಗದಿಮಾಡಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಮಂತ್ರಿಗಳು ಅಲ್ಲಿ ಹೋಗಿ ವಾಸಮಾಡುವುದಕ್ಕೆ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ಸ್ಕೂಲು ಇಲ್ಲ ಎಂದು ಹೇಳಿದರು. ಹಾಗಾದರೆ ಅಲ್ಲಿ ಸುತ್ತಮುತ್ತಲೂ ಇನ್ನೂ ಅನೇಕ ಮನೆಗಳು ಇವೆಯೋ ಇಲ್ಲವೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಸ್ಥಳಕ್ಕೆ ಹೋಗಿ ನೋಡಿದರೆ ತಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಈಗ ಈ ಕಟ್ಟಡಗಳನ್ನು ಮಾರಬೇಕೆಂದು ಹೇಳುತ್ತಾ ಇದ್ದೀರಿ. ಕಡಮೆಬೆಲೆಗೆ ಮಾರುತ್ತೀರೋ ಅಥವಾ ಟೆಂಡರ್ ಕರೆಯುತ್ತಿರೋ ?

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಕೆ. ಎ. ಪಾಟೀಲ್.—ಎಷ್ಟು ಜನ ಮಂತ್ರಿಗಳು ಸರ್ಕಾರಿ ಕ್ವಾರ್ಟ್ರ್ಸ್‌ನಲ್ಲಿ ಇದ್ದಾರೆ ?

ಅಧ್ಯಕ್ಷರು.—ಅದು ಬೇರೆ ಪ್ರಶ್ನೆ ಆಯಿತು.

Teachers appointed under the Central Scheme.

Q.—333 Sri M. LINGE GOWDA (Kanakapura).—

Will the Government be pleased to state :—.

(*a*) the number of primary school teachers appointed in the State under the Central Scheme ;

(*b*) the difference between the salary drawn by the teachers appointed by the Education Department and that drawn by the teachers appointed under the Central Scheme :

(*c*) whether it is a fact that the teachers appointed under the Central Seheme have been deprived of promotion while those appointed by the Education Department are preferred for promotion ;

(*d*) whether the teachers appointed under the Central Scheme are given chances on the basis of their seniority to work in middle school ?

A.—Sri V. VENKATAPPA (Minister for Education).—

(*a*) 2,402 :

(*b*)—

	Before revision	*After revision*
Pay of Primary School Teachers appointed by the Education Department.	Rs. 25 in grade 25-1-30-1-45	Rs. 40-1-50-2-60 FOR non-S.S.L.C. Untrained teachers, Rs. 40-2-50-3-80 for non-S. S. L. C. trained teachers.
Pay of Primary School Teachers appointed under the Central Scheme.	Rs. 40 in grade 40-2-50-3-80	Rs. 50-3-80-4-100 for teachers with S.S.L.C. qualification.

(*c*) No.

(*d*) Yes.

ಶ್ರೀ ಎಂ. ಲಿಂಗೇಗೌಡ.—ಕೇಂದ್ರ ಸರ್ಕಾರದ ಸ್ಕೇಲ್ಸು ಇಂಥಿಂಥಾದ್ದು ಎಂದು ಕೊಟ್ಟಿದ್ದೀರಿ. ಅವುಗಳೆಲ್ಲಕ್ಕೂ ಅವರೇ ಪೂರ್ತಿ ಹಣ ಕೊಡುತ್ತಾ ಇದ್ದಾರೆಯೇ ?

ಶ್ರೀ ವಿ. ವೆಂಕಟಪ್ಪ.—ಪೂರ್ತಿ ಅಲ್ಲ. ಶೇಕಡ 50.

ಶ್ರೀ ಎಂ ಲಿಂಗೇಗೌಡ.—ಅವರಿಗೆ ನಮ್ಮ ಡಿಪಾರ್ಟ್‌ಮೆಂಟಿನ ಕಾನೂನು ಪ್ರಕಾರ ಟ್ರಾನ್ಸ್‌ಫರ್, ಪ್ರಮೋಷನ್ ಇವೆಲ್ಲವೂ ವಿಶೇಷವಾಗಿ ಅನ್ವಯಿಸುತ್ತದೆಯೇ ?

ಶ್ರೀ ವಿ. ವೆಂಕಟಪ್ಪ.—ಅನ್ವಯಿಸುತ್ತದೆ.

Sri G. B. SHANKARA RAO.—Does this information pertain to old Mysore?

Sri V. VENKATAPPA.—The whole of the State.

ಶ್ರೀ ಜಿ. ಬಿ. ಶಂಕರರಾವ್.—ಬೊಂಬಾಯಿ ಕರ್ನಾಟಕದಲ್ಲಿ ಪ್ರಾಥಮಿಕ ಶಾಲೆಗಳು ಎಷ್ಟಿವೆ ?

ಅಧ್ಯಕ್ಷರು.—ಇದು ಶಾಲೆಯ ಪ್ರಶ್ನೆ ಅಲ್ಲ. This is a different question ?

ಶ್ರೀ ಎಂ. ಲಿಂಗೇಗೌಡ.—ಈ ಸ್ಕೇಲ್ ಮಂಜೂರಾಗಿದೆಯೇ ?

ಶ್ರೀ ವಿ. ವೆಂಕಟಪ್ಪ.—ಹೌದು.

ಶ್ರೀ ಎಂ. ಲಿಂಗೇಗೌಡ.—ಸರ್ಕಾರದ ಆಜ್ಞೆ ಈಗ ಆಗಬೇಕಾಗಿರುವುದರಿಂದ ಟ್ರಾನ್ಸ್‌ಫರ್ಸ್ ಮತ್ತು ಪ್ರಮೋಷ್‌ಗಳಲ್ಲಿ ಕೆಲವು ಉಪಾಧ್ಯಾಯರುಗಳಿಗೆ ಇದರಿಂದ ತೊಂದರೆಯಾಗುತ್ತಾ ಇದೆ ಎಂಬುದು ಗೊತ್ತಿದೆಯೇ ?

ಶ್ರೀ ವಿ. ವೆಂಕಟಪ್ಪ.—ಇಲ್ಲ. ಅದು ಸಾಮಾನ್ಯವಾಗಿ ಪರಿಹಾರವಾಗಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಕೇಂದ್ರ ಸರ್ಕಾರದ ಸ್ಕೀಂ ಪ್ರಕಾರ ನೇಮಕ ಮಾಡಿದಂಥ ಉಪಾಧ್ಯಾಯರಿಗೆ 50—3-80—4-100 ಗ್ರೇಡು ಎಂದು ಹೇಳಿದ್ದೀರಿ. ಪ್ರಾಂತ ಸರ್ಕಾರದ ಸ್ಕೇಲ್ ಪ್ರಕಾರ 40—1-50—2-60 ಗ್ರೇಡು ಕೊಡುತ್ತೀರಿ. ಈ ತರಹ ಸಂಬಳ ಸಾರಿಗೆ ವ್ಯತ್ಯಾಸದಿಂದ ದಕ್ಷತೆ ಕಡಮೆಯಾಗಿ, ಅತೃಪ್ತಿ ಹೆಚ್ಚುವುದಕ್ಕೆ ಅವಕಾಶವಾಗಿಲ್ಲವೇ ?

ಶ್ರೀ ವಿ. ವೆಂಕಟಪ್ಪ.—ಅದರಲ್ಲಿ difference ಇದೆ.

Sri K. S. SURYANARAYANA RAO.—After revision, the scales for the Primary Teachers appointed under the Education Department is 40-1-50—2-60. . . . . .

Mr. SPEAKER.—For Non- S.S.L.C's there is a difference.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಕೆಲವು ಕಡೆ ಏಕ ಉಪಾಧ್ಯಾಯ ಶಾಲೆಗಳಿವೆ. ಅಂತಹ ಕಡೆ ಅವರಿಗೆ ಕೊಡುವ ಸಂಬಳ ಎಷ್ಟು ?

ಶ್ರೀ ವಿ. ವೆಂಕಟಪ್ಪ.—ಆ ಶಾಲೆಗಳಿಗೂ ಇಷ್ಟೆ.

ಶ್ರೀ ಯು. ಎಂ. ಮಾದಪ್ಪ.—2,402 ಜನರ ನೇಮಕವಾಗಿದೆ ಎಂದು ಹೇಳಿದ್ದೀರಿ. ಇದು ನೇಮಕ ಆಗಿರುವುದೇ ಅಥವಾ ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿ enlist ಆಗಿರುವುದೇ ?

ಶ್ರೀ ವಿ. ವೆಂಕಟಪ್ಪ.—ಇದಕ್ಕೂ ಪಬ್ಲಿಕ್‌ಸರ್ವೀಸ್ ಕಮೀಷನ್ನಿಗೂ ಸಂಬಂಧವಿಲ್ಲ. ಇದು ನೇಮಕ ಆಗಿರುವುದು.

ಶ್ರೀ ಯು. ಎಂ. ಮಾದಪ್ಪ.—ಸೆಂಟ್ರಲ್ ಸ್ಕೀಂನಲ್ಲಿ ಎಷ್ಟು ಜನ ನೇಮಕ ಆಗಬೇಕೆಂದು ಮೊದಲು ಸರ್ಕಾರ ಮನಸ್ಸು ಮಾಡಿತ್ತು ?

ಶ್ರೀ ವಿ. ವೆಂಕಟಪ್ಪ.—ನಮ್ಮ ಹಳೆಯ ಮೈಸೂರಿನಲ್ಲಿ 500. ಹೊರಗಡೆಯಿಂದ ಸೇರುವ ಪ್ರದೇಶದಲ್ಲಿ 600 ಚಿಲ್ಲರೆ.

ಶ್ರೀ ಡಿ. ಬಿ. ಸೀತಾರಾಮರಾವ್.—ಎಸ್. ಎಸ್. ಎಲ್. ಸಿ. ಪರೀಕ್ಷೆ ಮಾಡಿ ತರಪೇತು ಹೊಂದಿರುವ ಉಪಾಧ್ಯಾಯರಿಗೆ 40-2—50—3-80 ಎಂದು ಇದೆ. ಎಸ್.ಎಸ್.ಎಲ್.ಸಿ. ಪಾಸ್ ಮಾಡಿರತಕ್ಕವರು ಪ್ರೈಮರಿ ಸ್ಕೂಲ್‌ನಲ್ಲಿ ಇವೊತ್ತು ಏನು ಸಂಬಳ ತೆಗೆದು ಕೊಳ್ಳುತ್ತಾ ಇದ್ದಾರೋ ಅದಕ್ಕಿಂತ ಹೆಚ್ಚು ಸಂಬಳ ಮಿಡ್ಲ್ ಸ್ಕೂಲ್‌ನಲ್ಲಿ ಎಸ್. ಎಸ್. ಎಲ್. ಸಿ. ಪಾಸ್ ಮಾಡಿರತಕ್ಕ ಉಪಾಧ್ಯಾಯರು ತೆಗೆದು ಕೊಳ್ಳುತ್ತಾ ಇದ್ದಾರೆ. ಈ ವ್ಯತ್ಯಾಸ ಏಕೆ ?

Sri V. VENKATAPPA.—That does not arise out of themai question, Sir.

Sri G. SHIVAPPA.—May I know whether it is entirely financed by the Central Government ?

Sri V. VENKATAPPA.—50 per cent.

Sri G. SHIVAPPA.—Is it not a fact that for the schools newly sanctioned under the Central Scheme no teachers are transferred there and there is a lot of administrative difficulties in the matter ?

ಶ್ರೀ ವಿ. ವೆಂಕಟಪ್ಪ.—ಮೊದಲು ಆ ರೀತಿಯಿತ್ತು. ಇತ್ತೀಚೆಗೆ ಅದೆಲ್ಲಾ ಪೂರಾ ನಮಗೇ ಬಂದಿವೆ. ಆದುದರಿಂದ ಆ ಯೋಜನೆ ಇದಕ್ಕೆ ಸಂಬಂಧಪಡುವುದಿಲ್ಲ.

ಶ್ರೀಮತಿ ಲೀಲಾವತಿ ಮಾಗಡಿ ವೆಂಕಟೇಶ್.—ಈ ಸ್ಕೀಂ ಪ್ರಕಾರವಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ ಎಷ್ಟು ಜನ ಉಪಾಧ್ಯಾಯಿರನ್ನು ನೇಮಿಸಲಾಗಿದೆ ?

ಶ್ರೀ ವಿ. ವೆಂಕಟಪ್ಪ.—ನಾನಾಗಲೇ ಹೇಳಿದ್ದೇನೆ, 1,600 ಜನ ಎಂದು.

ಶ್ರೀಮತಿ ಲೀಲಾವತಿ ಮಾಗಡಿ ವೆಂಕಟೇಶ್.—ಆ ಪೈಕಿ ಅಧ್ಯಾಪಕಿಯರೆಷ್ಟು ಜನ ?

ಶ್ರೀ ವಿ. ವೆಂಕಟಪ್ಪ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹೊಸ ಮೈಸೂರು ಮತ್ತು ಹಳೆಯ ಮೈಸೂರು ಭಾಗಕ್ಕೆ ಎಷ್ಟೆಷ್ಟು ಜನರನ್ನು ನೇಮಿಸಲಾಗಿದೆ ?

ಶ್ರೀ ವಿ. ವೆಂಕಟಪ್ಪ.—ಹಳೆಯ ಮೈಸೂರಿಗೆ 500 ಜನ ಮತ್ತು ಒಟ್ಟು ಹೊಸ ಮೈಸೂರು ಪ್ರದೇಶದಲ್ಲಿ 1,600ಜನರನ್ನು ಅಪಾಯಿಂಟ್ ಮಾಡಿಕೊಳ್ಳಲಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಜನರನ್ನು ಅಪಾಯಿಂಟ್ ಮಾಡಿಕೊಂಡಿದ್ದೀರಿ ?

ಶ್ರೀ ವಿ. ವೆಂಕಟಪ್ಪ.—ಈಗ ಆ ಪದ್ಧತಿಯನ್ನು ಕೈಬಿಡಲಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ಈಗ ಅದು ರದ್ದಾಗಿದೆಯೇ ?

ಶ್ರೀ ವಿ. ವೆಂಕಟಪ್ಪ.—ಹೌದು.

Secondary and Higher Elementary Schools maintained by the Corporation.

Q.—515. Sri V. P. DEENADAYALU NAIDU (Cubbonpet).—

Will the Government be pleased to state :—

(*a*) the number of Secondary and Higher Elementary Schools run by the Corporation;

(*b*) whether any reference has been received from the Corporation requesting to take over the Higher Elementary School under their control;

(*c*) whether they would run the Educational Institutions at their cost in view of the recommendations of the Local Finance Enquiry Committee that there should be no financial